ದಿವಾಣಿ ನ್ಯಾಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಿತ್ತೂರ.

ದಿನಾಂಕಃ 27.06.2026 ರಂದು ಪಿ.ಡಬ್ಲ್ಯೂ-1ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಅವರು ತಮ್ಮ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಪಿ.ಡಬ್ಲ್ಯೂ-1 ಅವರ ಮುಖ್ಯ ವಿಚಾರಣೆಯಾಗಿ ಪರಿಗಣಿಸಲು ಕೋರಿದ್ದು ಅವರ ಕೋರಿಕೆಯನ್ನು ಮನ್ನಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಸಿ ಹೆಚ್ ಎನ್ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದಲ್ಲಿರುವ ಅಂಶಗಳು ಸತ್ಯವಾಗಿರುತ್ತದೆ, ಅದಕ್ಕೆ ನಾನು ನನ್ನ ಸಹಿ ಮಾಡಿರುತ್ತೇನೆ.

1. ಪ್ರತಿವಾದಿಯವರು ನೀಡಿದ ಹಿಂಬರಹವನ್ನು ನಿಪಿ-1 ಎಂದು,
2. ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ನಿಪಿ-2 ಎಂದು,
3. ನನ್ನ ತಂದೆಯ 2ನೇ ಹೆಂಡತಿಯ ಮರಣ ಪ್ರಮಾಣ ಪತ್ರವನ್ನು ನಿಪಿ-3 ಎಂದು,
4. ನನ್ನ ಮತ್ತು ನನ್ನ ತಂಗಿಯ ಆಧಾರ ಕಾರ್ಡಗಳನ್ನು ನಿಪಿ-4 ಮತ್ತು 5 ಎಂದು,
5. ಪತ್ರಿಕಾ ಪ್ರಕಟನೆಯನ್ನು ನಿಪಿ-6 ಎಂದು ನಿಶಾನೆಗಳಾಗಿ ಗುರುತಿಸಲಾಯಿತು.

**ಪಾಟೀ ಸವಾಲುಃ ಸರ್ಕಾರಿ ಅಭೀಯೋಜಕರಿಂದಃ**

ನನ್ನ ತಂದೆ ಮರಣ ಹೊಂದಿ ಈಗ ಒಂದು ವರ್ಷ ಆಯಿತು. ಸದರಿಯವರು ಮುತಗಾ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ನನ್ನ

ತಾಯಿಯ ಹೆಸರು ಬಸಮ್ಮ. ನಾನು ಮತ್ತು ಉಳಿದ 2ನೇ ವಾದಿ ನನ್ನ ತಂದೆಯ ಮೊದಲನೆಯ ಹೆಂಡತಿಯ ಮಕ್ಕಳು. ಬಸಮ್ಮ ಯಾವಾಗ ತೀರಿಕೊಂಡಿರುತ್ತಾಳೆ ಎಂದು ನನಗೆ ಗೊತ್ತಿಲ್ಲ. ಸದರಿಯವರ ಮರಣ ಪ್ರಮಾಣ ಪತ್ರ ಇರುವುದಿಲ್ಲ. ಚೆನ್ನವ್ವ ನನ್ನ ತಂದೆಯ 2ನೇ ಹೆಂಡತಿ. 1 ಮತ್ತು 2 ನೇ ಪ್ರತಿವಾದಿಯರು ಸದರಿಯವರ ಮಕ್ಕಳು. ಸದರಿ 2ನೇ ಹೆಂಡತಿಯ ಮದುವೆ ಯಾವಾಗ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಚೆನ್ನವ್ವ ಯಾವಾಗ ತೀರಿಕೊಂಡರು ಎಂದು ಗೊತ್ತಿಲ್ಲ. ನಾನು ಮತ್ತು 2ನೇ ವಾದಿಯು ಸದರಿ ಸಿದ್ದಪ್ಪನ ಮಕ್ಕಳು ಎಂದು ತೋರಿಸಲು ಆಧಾರ ಕಾರ್ಡಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ತಂದೆಯ ಹೆಸರಿನಲ್ಲಿ ದೇವರಶಿಗಿಹಳ್ಳಿಯಲ್ಲಿ ಆಸ್ತಿಗಳು ಇರುತ್ತದೆ. ನನ್ನ ತಂದೆಯ ವಾರಸ ಪ್ರಮಾಣ ಪತ್ರ ಈಗ ಆಸ್ತಿಯ ದಾಖಲೆಗಳಲ್ಲಿ ಹೆಸರು ಬದಲಾವಣೆ ಮಾಡಲು ಬೇಕಾಗಿರುತ್ತದೆ. ಪತ್ರಿಕಾ ಪ್ರಕಟನೆಯನ್ನು ತೆಗೆದುಕೊಂಡಿದ್ದೇನೆ. ನನ್ನ ತಂದೆಯ ಆಸ್ತಿಯನ್ನು ಕಬಳಿಸಲು ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. 2021 ರಲ್ಲಿ ವಾರಸಾ ಪ್ರಮಾಣ ಪತ್ರ ಪಡೆಯಲು ಏನು ತೊಂದರೆ ಇರಲಿಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಮಹಮ್ಮದ ಅಲಿ ನಾಯಕ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕಿತ್ತೂರ.